15.3.1. ಇವುಗಳ ಮೊತ್ತ ಮತ್ತು ಚಕ್ರಬಡ್ಡಿಯನ್ನು ಲೆಕ್ಕಿಸಿ.

ಚಕ್ರಬಡ್ಡಿ ಸೂತ್ರ A=P$\left(1+\frac{R}{100}\right)^n$ CI=A-P; ಸರಳಬಡ್ಡಿ ಸೂತ್ರ SI=$\left(\frac{P*T*R}{100}\right)$

| | | |
|---|---|---|
| | (a) ವಾರ್ಷಿಕ 121 % ದರದಲ್ಲಿ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದಾಗ ರೂ.10,800ಗಳಿಗೆ 3 ವರ್ಷಗಳಿಗೆ. | (b) ವಾರ್ಷಿಕ 10% ದರದಲ್ಲಿ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದಾಗ ರೂ.18,000ಗಳಿಗೆ $2\frac{1}{2}$ ವರ್ಷಗಳಿಗೆ. |
| P | 10,800 | 18,000 |
| R% | $12\frac{1}{2}=\frac{25}{2}$ | 10 |
| n | 3 | $2\frac{1}{2}$ |
| A | $10800*\left(1+\frac{25}{2*100}\right)^3=10800*\left(\frac{9}{8}\right)*\left(\frac{9}{8}\right)*\left(\frac{9}{8}\right)$ =15377.34 | $18000*\left(1+\frac{10}{100}\right)^2=18000*\left(\frac{11}{10}\right)*\left(\frac{11}{10}\right)=21,780$<br>ಮುಂದಿನ $\frac{1}{2}$ ವರ್ಷಕ್ಕೆ ಇದರ ಮೇಲೆ ಸರಳ ಬಡ್ಡಿ$=21780*\frac{1}{2}*\left(\frac{10}{100}\right)=1089$ |
| CI=A-P | 15377.34-10800=4577.34 | =(21780+1089)-18000=4,869 |

A Project of www.eShale.org

ಚಕ್ರಬಡ್ಡಿ ಸೂತ್ರ $A=P\left(1+\frac{R}{100}\right)^n$ CI=A-P; ಅರ್ಧವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದಾಗ $A=P\left(1+\frac{r}{100}\right)^N$

| | (c) ವಾರ್ಷಿಕ 8% ದರದಲ್ಲಿ ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದಾಗ ರೂ.62,500 ಗಳಿಗೆ $1\frac{1}{2}$ ವರ್ಷಗಳಿಗೆ. | (d) ವಾರ್ಷಿಕ 9% ದರದಲ್ಲಿ ಅರ್ಧವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದಾಗ ರೂ.8,000 ಗಳಿಗೆ 1ವರ್ಷಕ್ಕೆ. | (e) ವಾರ್ಷಿಕ 8% ದರದಲ್ಲಿ ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದಾಗ ರೂ.10,000 ಗಳಿಗೆ 1 ವರ್ಷಕ್ಕೆ. |
|---|---|---|---|
| P | 62,500 | 8,000 | 10,000 |
| R % | 8 | 9 | 8 |
| ಅರ್ಧ ವರ್ಷಕ್ಕೆ r % | 4 | $\frac{9}{2}$ | 4 |
| ವರ್ಷಗಳು n | $1\frac{1}{2}$ ವರ್ಷಗಳು | 1 ವರ್ಷ | 1 ವರ್ಷ |
| ಅವಧಿ N | 3 ಅರ್ಧವರ್ಷಗಳು | 2 ಅರ್ಧವರ್ಷಗಳು | 2 ಅರ್ಧವರ್ಷಗಳು |
| A | $62500*\left(1+\frac{4}{100}\right)^3$<br>$=62500*\left(\frac{26}{25}\right)*\left(\frac{26}{25}\right)*\left(\frac{26}{25}\right)$<br>=70,304 ರೂ. | $8000*\left(1+\frac{9}{2*100}\right)^2$<br>$=8000*\left(\frac{209}{200}\right)*\left(\frac{209}{200}\right)$<br>=8,736.20 ರೂ. | $10000*\left(1+\frac{4}{100}\right)^2$<br>$=10000*\left(\frac{26}{25}\right)*\left(\frac{26}{25}\right)$<br>=10,816 ರೂ. |
| CI=A-P | =70,304-62500<br>=7804 ರೂ. | =8,736.20-8000<br>=736.20 ರೂ. | =10,816-10,000<br>=816 ರೂ. |

A Project of www.eShale.org

15.3.2. ಕಮಲಾಳು ಸ್ಕೂಟರ್ ಕೊಳ್ಳಲು ವಾರ್ಷಿಕ 15% ದರದಲ್ಲಿ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡುವಂತೆ ಬ್ಯಾಂಕೊಂದರಿಂದ ರೂ.26,400ಗಳನ್ನು ಸಾಲವಾಗಿ ತೆಗೆದುಕೊಂಡಿರುತ್ತಾಳೆ. ಹಾಗಾದರೆ 2 ವರ್ಷದ 4 ತಿಂಗಳ ಕೊನೆಯಲ್ಲಿ ಈ ಸಾಲವನ್ನು ತೀರಿಸಲು ಆಕೆ ಪಾವತಿಸಬೇಕಾದ ಮೊತ್ತವೆಷ್ಟು?

P=26,400,R=15%.n=2

$A=26400*\left(1+\frac{15}{100}\right)^2$

$=26400*\left(\frac{23}{20}\right)*\left(\frac{23}{20}\right)$

=34,914

ಇನ್ನು ಉಳಿದ 4 ತಿಂಗಳುಗಳಿಗೆ$\left(=\left(\frac{1}{3}\right)\right.$ವರ್ಷ) ಸರಳಬಡ್ಡಿ ಲೆಕ್ಕ ಹಾಕಿದಾಗ $SI=34914*\left(\frac{1}{3}\right)*\left(\frac{15}{100}\right)=$1,745.70

ಪಾವತಿಸಬೇಕಾದ ಮೊತ್ತ=34,914+1745.70=36,659.70 ರೂ.

15.3.3. ಫಬೀನಾಳು ರೂ.12,500ನ್ನು ವಾರ್ಷಿಕ 12% ದರದಲ್ಲಿ 3 ವರ್ಷಗಳಿಗೆ ಸರಳಬಡ್ಡಿಯ ಪ್ರಕಾರ ಮತ್ತು ರಾಧಾಳು ಇದೇ ಮೊತ್ತವನ್ನು ವಾರ್ಷಿಕ 10% ದರದಲ್ಲಿ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡುವಂತೆ ಇದೇ ಅವಧಿಗೆ ಸಾಲಗಳನ್ನು ತೆಗೆದುಕೊಳ್ಳುತ್ತಾರೆ. ಇವರಲ್ಲಿ ಯಾರು ಹೆಚ್ಚಿನ ಬಡ್ಡಿಯನ್ನು ಪಾವತಿಸುತ್ತಾರೆ ಮತ್ತು ಎಷ್ಟು?

ಫಬೀನ:

P=12,500,R=12%,n=3

$SI= 12500 *3*\left(\frac{12}{100}\right)$ =4,500 ರೂ.

ರಾಧಾ:

P=12,500,R=10%,n=3

$A= 12500*\left(1+\frac{10}{100}\right)^3$

$=12500*\left(\frac{11}{10}\right)*\left(\frac{11}{10}\right)*\left(\frac{11}{10}\right)$

=16,637.5

CI=A-P= 16,637.5-12,500=4,137.50 ರೂ.

ಫಬೀನಾಳು ಪಾವತಿಸುವ ಹೆಚ್ಚಿನ ಬಡ್ಡಿ=4500-4137.50=362.50 ರೂ.

A Project of www.eShala.org

15.3.4. ನಾನು, ಜಮಶೇಡ್‌ನಿಂದ ರೂ.12,000ನ್ನು ವಾರ್ಷಿಕ 6% ಸರಳಬಡ್ಡಿ ದರದಲ್ಲಿ 2ವರ್ಷಗಳ ಅವಧಿಗೆ ತೆಗೆದುಕೊಂಡಿದ್ದೇನೆ. ಇದೇ ಮೊತ್ತವನ್ನು ವಾರ್ಷಿಕ 6% ಚಕ್ರಬಡ್ಡಿ ದರದಲ್ಲಿ ತೆಗೆದುಕೊಂಡಿದ್ದರೆ, ನಾನು ಎಷ್ಟು ಹೆಚ್ಚಿನ ಹಣವನ್ನು ಪಾವತಿಸಬೇಕಾಗಿತ್ತು?

ಸರಳ ಬಡ್ಡಿ:

P=12,000,R=6%,n=2

$SI = 12000 * 2 * \left(\frac{6}{100}\right)$

=1,440 ರೂ.

ಚಕ್ರಬಡ್ಡಿ:

P=12,000,R=6%,n=2

$A = 12000 * \left(1 + \frac{6}{100}\right)^2$

$= 12000 * \left(\frac{53}{50}\right) * \left(\frac{53}{50}\right)$

=13,483.20.

CI=A-P=13,483.20-12,000=1483.20 ರೂ.

ಪಾವತಿಸಿದ ಹೆಚ್ಚಿನ ಹಣ:1,483.20-1,440=43.20 ರೂ.

A Project of www.eShale.org

15.3.5. ವಾಸುದೇವನು ವಾರ್ಷಿಕ 12% ದರದಲ್ಲಿ ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡುವಂತೆ ರೂ. 60,000 ಗಳನ್ನು ಹೂಡಿಕೆ ಮಾಡಿರುತ್ತಾನೆ. ಅವನು, (i) 6 ತಿಂಗಳುಗಳ ನಂತರ (ii) 1 ವರ್ಷದ ನಂತರ ಎಷ್ಟು ಮೊತ್ತವನ್ನು ಗಳಿಸುತ್ತಾನೆ?

(i) P=60,000,R=12%

ಅರ್ಧ ವರ್ಷಕ್ಕೆ r=6%,N= 1ಅರ್ಧ ವರ್ಷ

$$A=60000*\left(1+\frac{6}{100}\right)^{1}$$

$$=60000*\left(\frac{106}{100}\right)$$

= 63,600 ರೂ. ನ್ನು 6 ತಿಂಗಳುಗಳ ನಂತರ ಪಡೆಯುತ್ತಾನೆ.

(ii) P=60,000,R=12%

ಅರ್ಧ ವರ್ಷಕ್ಕೆ r=6%,N= 2ಅರ್ಧ ವರ್ಷಗಳು

$$A=60000*\left(1+\frac{6}{100}\right)^{2}$$

$$=60000**\left(\frac{53}{50}\right)*\left(\frac{53}{50}\right)$$

= 67,416 ರೂ. ನ್ನು 1 ವರ್ಷದ ನಂತರ ಪಡೆಯುತ್ತಾನೆ.

A Project of www.eShale.org

15.3.6. ಆರೀಫ್‌ನು ಬ್ಯಾಂಕೊಂದರಿಂದ ರೂ.80,000 ಸಾಲವನ್ನು ತೆಗೆದುಕೊಂಡಿರುತ್ತಾನೆ. ಬಡ್ಡಿಯ ದರವು ವಾರ್ಷಿಕ 10% ಆತನು ಬಡ್ಡಿಯನ್ನು (i) ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ಮತ್ತು (ii) ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ, $1\frac{1}{2}$ ವರ್ಷಗಳ ನಂತರ ಪಾವತಿಸಬೇಕಾಗುವ ಮೊತ್ತಗಳ ವ್ಯತ್ಯಾಸವನ್ನು ಕಂಡುಹಿಡಿಯಿರಿ.

(i) P=80,000, R=10% n=1

$A=80000*\left(1+\frac{10}{100}\right)^1$

$=80000*\left(\frac{11}{10}\right)$ = 88,000

ನಂತರದ 6 ತಿಂಗಳಿಗೆ $SI=88000*\frac{1}{2}*\left(\frac{10}{100}\right)$=4,400,

ಪಾವತಿಸಬೇಕಾಗುವ ಮೊತ್ತ=88,000+4,400=92,400 ರೂ.

(ii)P=80,000,R=10%,n=$1\frac{1}{2}$ ವರ್ಷ

ಅರ್ಧ ವರ್ಷಕ್ಕೆ r=5%,N= 3 ಅರ್ಧ ವರ್ಷಗಳು

$A= 80000*\left(1+\frac{5}{100}\right)^3$

$=80000*\left(\frac{21}{20}\right)*\left(\frac{21}{20}\right)*\left(\frac{21}{20}\right)$

=92,610 ರೂ.

ಪಾವತಿಸಬೇಕಾಗುವ ಮೊತ್ತಗಳ ವ್ಯತ್ಯಾಸ=92,610-92,400=210 ರೂ.

A Project of www.eShale.org

15.3.7. ಮರೀಯಾ ಒಂದು ವ್ಯವಹಾರದಲ್ಲಿ ರೂ.8000ನ್ನು ಹೂಡಿಕೆ ಮಾಡಿರುವಳು. ಆಕೆಗೆ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ವಾರ್ಷಿಕ 5% ದರದಲ್ಲಿ ಬಡ್ಡಿ ಬರುತ್ತಿದ್ದರೆ. (i) 2 ವರ್ಷಗಳ ಕೊನೆಯಲ್ಲಿ ಆಕೆಯ ಖಾತೆಯಲ್ಲಿ ಜಮಾ ಆಗಬೇಕಾದ ಮೊತ್ತ. (ii) 3ನೇ ವರ್ಷದ ಬಡ್ಡಿ ಇವುಗಳನ್ನು ಕಂಡುಹಿಡಿಯಿರಿ.

(i) P=8000,R=5%,n=2

$$A=8000*\left(1+\frac{5}{100}\right)^2$$

$$=8000*\left(\frac{21}{20}\right)*\left(\frac{21}{20}\right)$$

= 8,820

2 ವರ್ಷಗಳ ಕೊನೆಯಲ್ಲಿ ಆಕೆಯ ಖಾತೆಯಲ್ಲಿ ಜಮಾ ಆಗಬೇಕಾದ ಮೊತ್ತ 8,820 ರೂ

(ii) P=8000,R=5%,n=3

$$A=8000*\left(1+\frac{5}{100}\right)^3$$

$$=8000*\left(\frac{21}{20}\right)*\left(\frac{21}{20}\right)*\left(\frac{21}{20}\right)$$

= 9,261 ರೂ. ಇದೇ 3 ವರ್ಷಗಳ ಕೊನೆಯಲ್ಲಿ ಆಕೆಯ ಖಾತೆಯಲ್ಲಿ ಜಮಾ ಆಗಬೇಕಾದ ಮೊತ್ತ

3ನೇ ವರ್ಷದ ಬಡ್ಡಿ=ಮೇಲಿನ ಎರಡು ಮೊತ್ತಗಳ ವ್ಯತ್ಯಾಸ=9,261-8,820=441 ರೂ.

A Project of www.eShale.org

15.3.8. ವಾರ್ಷಿಕ 10% ದರದಲ್ಲಿ ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ರೂ.10,000ಗಳಿಗೆ $1\frac{1}{2}$ ವರ್ಷಗಳಿಗೆ ಆಗುವ ಮೊತ್ತ ಹಾಗೂ ಚಕ್ರಬಡ್ಡಿಯನ್ನು ಕಂಡುಹಿಡಿಯಿರಿ. ಈ ಬಡ್ಡಿಯು, ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ಅವನಿಗೆ ದೊರಕುತ್ತಿದ್ದ ಬಡ್ಡಿಗಿಂತ ಹೆಚ್ಚಿಗೆ ಆಗಿರುತ್ತದೆಯೇ?

(i)ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯ ಲೆಕ್ಕ:

P=10,000,R=10%,n= 2

ಅರ್ಧ ವರ್ಷಕ್ಕೆ r=5%,N= 3 ಅರ್ಧ ವರ್ಷಗಳು

$A=10000*\left(1+\frac{5}{100}\right)^3$

$=10000*\left(\frac{21}{20}\right)*\left(\frac{21}{20}\right)*\left(\frac{21}{20}\right)$

=11,576.25 ರೂ. ಇದೇ $1\frac{1}{2}$ ವರ್ಷಗಳಿಗೆ ಆಗುವ ಮೊತ್ತ

CI=A-P= 11,576.25-10,000=1,576.25 ರೂ. ಇದೇ ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ಸಿಗುವ ಬಡ್ಡಿ

(ii)ವರ್ಷಕೊಮ್ಮೆ ಚಕ್ರಬಡ್ಡಿಯ ಲೆಕ್ಕ:

P=10,000,R=10%,n= 1

$A=10000*\left(1+\frac{10}{100}\right)^1$

$=10000*\left(\frac{11}{10}\right)$

=11,000 ರೂ.

CI=A-P=11,000-10,000=1,000

ನಂತರದ 6 ತಿಂಗಳಿಗೆ 11,000 ದ ಮೇಲೆ SI

$=11000*\frac{1}{2}*\left(\frac{10}{100}\right)$

=550 ರೂ.

ಒಟ್ಟು ಚಕ್ರ ಬಡ್ಡಿ=1,000+550=1,550 ಇದೇ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ಸಿಗುವ ಬಡ್ಡಿ

1,576.25 > 1,550

ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ಸಿಗುವ ಬಡ್ಡಿಯು ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡಿದರೆ ಸಿಗುವ ಬಡ್ಡಿಗಿಂತ ಜಾಸ್ತಿ.

A Project of www.eShale.org

15.3.9. ರಾಮನು ರೂ.4096ನ್ನು ವಾರ್ಷಿಕ $12\frac{1}{2}$ % ದರದಲ್ಲಿ ಅರ್ಧ ವರ್ಷಕೊಮ್ಮೆ ಚಕ್ರಬಡ್ಡಿಯನ್ನು ಲೆಕ್ಕ ಮಾಡುವಂತೆ 18ತಿಂಗಳ ಅವಧಿಗೆ ಕೊಟ್ಟಾಗ, ಅವನಿಗೆ ದೊರಕುವ ಮೊತ್ತವನ್ನು ಕಂಡುಹಿಡಿಯಿರಿ.

$P=4,096, R=12\frac{1}{2}\%, n=1\frac{1}{2}$ ವರ್ಷಗಳು

ಅರ್ಧ ವರ್ಷಕ್ಕೆ $r=\frac{25}{4}\%, N=3$ ಅರ್ಧ ವರ್ಷಗಳು

$$A=4096*\left(1+\frac{25}{4*100}\right)^3$$

$$=4096*\left(\frac{17}{16}\right)*\left(\frac{17}{16}\right)*\left(\frac{17}{16}\right)$$

$=4,913$ ರೂ. ಇದು ಅವನಿಗೆ ದೊರಕುವ ಮೊತ್ತ

A Project of www.eShale.org

15.3.10. ಒಂದು ಸ್ಥಳದ ಜನಸಂಖ್ಯೆಯು 2003ರಲ್ಲಿ ವಾರ್ಷಿಕ 5%ದರದಲ್ಲಿ 54,000ಕ್ಕೆ ಏರಿದೆ.

(i) 2001ರಲ್ಲಿ ಜನಸಂಖ್ಯೆಯನ್ನು ಕಂಡುಹಿಡಿಯಿರಿ.

(ii) 2005ರಲ್ಲಿ ಆದರ ಜನಸಂಖ್ಯೆಯನ್ನು ಎಷ್ಟಾಗಬಹುದು.

2001ರಲ್ಲಿ ಜನಸಂಖ್ಯೆ P ಆಗಿರಲಿ, R=5% & n=2(=2003-2001)

$$A= P*\left(1+\frac{5}{100}\right)^2$$

$$\Rightarrow P*\left(\frac{21}{20}\right)*\left(\frac{21}{20}\right)=54000(\text{ದತ್ತ})$$

$$\Rightarrow P=54000*\left(\frac{20}{21}\right)*\left(\frac{20}{21}\right)$$

=48,890 ಇದೇ 2001ರಲ್ಲಿನ ಜನಸಂಖ್ಯೆ

2003ರ ಜನಸಂಖ್ಯೆ:P=54,000,R=5%

2005ರ ಜನಸಂಖ್ಯೆ $A= 54000*\left(1+\frac{5}{100}\right)^2$

$$=54000*\left(\frac{21}{20}\right)*\left(\frac{21}{20}\right)$$

=59,535

A Project of www.eShale.org

15.3.11. ಒಂದು ಪ್ರಯೋಗಾಲಯದಲ್ಲಿ ಒಂದು ನಿರ್ದಿಷ್ಟವಾದ ಪ್ರಯೋಗದಲ್ಲಿ ಬ್ಯಾಕ್ಟೀರೀಯಾದ ಸಂಖ್ಯೆಯು ಪ್ರತಿ ಗಂಟೆಗೆ 2.5% ವೇಗದಲ್ಲಿ ಹೆಚ್ಚುತ್ತಿದೆ. ಆರಂಭದಲ್ಲಿ ಬ್ಯಾಕ್ಟೀರೀಯಾದ ಸಂಖ್ಯೆಯು 5,06,000 ಇದ್ದರೆ 2 ಗಂಟೆಯ ನಂತರ ಅದರ ಸಂಖ್ಯೆಯನ್ನು ಕಂಡುಹಿಡಿಯಿರಿ.

P=5,06,000; R=2.5%; n=2

2 ಗಂಟೆಯ ನಂತರ ಅದರ ಸಂಖ್ಯೆ

$$A = 506000 * \left(1+\frac{2.5}{100}\right)^2$$

$$= 506000 * \left(1+\frac{1}{40}\right)^2$$

$$= 506000 * \left(\frac{41}{40}\right) * \left(\frac{41}{40}\right)$$

$$\cong 5,31,616$$

A Project of www.eShale.org

15.3.12. ಸ್ಕೂಟರ್ ಒಂದನ್ನು ರೂ.42,000 ಕ್ಕೆ ಖರೀದಿಸಲಾಯಿತು. ವಾರ್ಷಿಕ 8% ದರದಲ್ಲಿ ಅದರ ಬೆಲೆಯು ಸವಕಳಿಯಾಗುತ್ತಿದೆ.ಒಂದು ವರ್ಷದ ನಂತರ ಅದರ ಬೆಲೆ ಎಷ್ಟು?

P=42,000, R=8%,n=1

$$A = 42000 * \left(1-\frac{8}{100}\right)^1$$

$$= 42000 * \left(1-\frac{2}{25}\right)^1$$

$$= 42000 * \left(\frac{23}{25}\right)$$

= 38,640 ರೂ. $\Rightarrow$ ಇದೇ 1ವರ್ಷದ ನಂತರ ಅದರ ಬೆಲೆ